# ಮಾಸ ಭವಿಷ್ಯ

**ಡಿಸೆಂಬರ್** 2020

## ಮೇಷ




ವೈಯಕ್ತಿಕ ಮತ್ತು ವೃತ್ತಿಪರ ಬದಲಾವಣೆಗಳನ್ನು ಎದುರಿಸಲು ಸಿದ್ಧರಾಗಿ. ಮನೆಯ ಬದಲಾವಣೆ, ನವೀಕರಣ ಅಥವಾ ಹೊಸ ವಾಸಸ್ಥಳಕ್ಕೆ ಹೋಗಬಹುದು. ಹಣಕಾಸು ಸ್ಥಿತಿ ಸುಧಾರಿಸಲಿದೆ.

**ಶುಭ:** 3, 4, 9, 21, 30

**ಅಶುಭ:** 19, 20, 27, 29

## ಕರ್ಕಾಟಕ



ಸಹಯೋಗ ಮತ್ತು ಸಹಕಾರವು ಅಭಿವೃದ್ಧಿ ಸಾಧಿಸಲು ನಿಮಗೆ ಸಹಾಯ ಮಾಡುತ್ತದೆ. ವೃತ್ತಿಜೀವನದಲ್ಲಿ ಪ್ರಮುಖ ಬದಲಾವಣೆಗಳಾಗಬಹುದು. ಹಣದ ಹರಿವು ಸಾಮಾನ್ಯವಾಗಿರುತ್ತದೆ. ಹೊಸ ಹೂಡಿಕೆಗಳಿಗೆ ಇದು ಸಕಾಲವಲ್ಲ.

**ಶುಭ:** 2, 7, 17, 18, 23

**ಅಶುಭ:** 1, 3, 8, 24

## ವೃಷಭ




ಸಕಾರಾತ್ಮಕ ಬದಲಾವಣೆಗಳು ಹೊಸ ನಿರೀಕ್ಷೆಗಳನ್ನು ಹುಟ್ಟಿಸಬಹುದು. ಹಣಕಾಸು ಮತ್ತು ಹೂಡಿಕೆಗಳನ್ನು ಮತ್ತೊಮ್ಮೆ ಪರಿಶೀಲಿಸಿ. ಕುಟುಂಬದ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಸಾಧ್ಯತೆ.

**ಶುಭ:** 7, 11, 12, 15, 19

**ಅಶುಭ:** 6, 27, 28, 30

## ಸಿಂಹ



ಗ್ರಹಣಗಳ ಪ್ರಭಾವದಿಂದ ಈ ತಿಂಗಳು ನಿಮ್ಮ ಜೀವನದಲ್ಲಿ ಗಮನಾರ್ಹ ಪರಿವರ್ತನೆಗಳು ಕಂಡುಬರಲಿವೆ. ಹಣದ ಹರಿವಿಗೆ ಇದ್ದ ಅಡೆತಡೆಗಳು ದೂರಾಗಲಿವೆ. ನಿಮ್ಮ ಯೋಜನೆಗಳನ್ನು ಸುಲಭವಾಗಿ ಸಾಧಿಸುವಿರಿ.

**ಶುಭ:** 6, 7, 8, 13, 27

**ಅಶುಭ:** 20, 21, 26, 30

## ಮಿಥುನ



ದಂಪತಿಯ ನಡುವೆ ಹೊಂದಾಣಿಕೆ ಹೆಚ್ಚುತ್ತದೆ. ಅವಿವಾಹಿತರಿಗೆ ಹೊಸ ಸಂಬಂಧಗಳನ್ನು ಬೆಸೆಯುವ ಅವಕಾಶಗಳಿವೆ. ಆರೋಗ್ಯದ ಬಗ್ಗೆ ಎಚ್ಚರಿಕೆ ಅತ್ಯಗತ್ಯ. ಔದ್ಯೋಗಿಕ ಅಭಿವೃದ್ಧಿ, ಆರ್ಥಿಕ ಸ್ಥಿತಿ ಉತ್ತಮವಾಗಿರುವುದು.

**ಶುಭ:** 7, 17, 19, 25, 27

**ಅಶುಭ:** 18, 20, 24, 30

## ಕನ್ಯಾ



ವೃತ್ತಿ, ಪ್ರೀತಿ, ಸಂಬಂಧಗಳು, ಕುಟುಂಬದ ಸಮಸ್ಯೆಗಳು ಮತ್ತು ವೈಯಕ್ತಿಕ ಆಕಾಂಕ್ಷೆಗಳು ನಿಮ್ಮನ್ನು ಬೇರೆ ಬೇರೆ ದಿಕ್ಕಿಗೆ ಎಳೆಯಲಿವೆ. ನೀವು ಯಾವುದಕ್ಕೆ ಆದ್ಯತೆ ನೀಡುವಿರಿ ಎನ್ನುವುದರ ಮೇಲೆ ನಿಮ್ಮ ಯಶಸ್ಸಿದೆ.

**ಶುಭ:** 1, 4, 5, 21, 27

**ಅಶುಭ:** 14, 20, 29, 30